**Q.P. Code – 50201**

**ದ್ವಿತೀಯ ಬಿ.ಎ./ಬಿ.ಎಸ್ಸಿ., ಪದವಿ ಪರೀಕ್ಷೆ, ಡಿಸೆಂಬರ್ 2017**

**(ದೂರ ಶಿಕ್ಷಣ)**

**ಕನ್ನಡ ಭಾಷಾ ಪತ್ರಿಕೆ – ೨**

**(DAB/DSB 010) – ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ–೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **1 × 4 = 04**

(೧) ಸಿಸಿರ ಮನೆ ಪಿಡಿದು ಪರಕೆಗೆ
ವಸಂತ ನಲವೇರ್ದ ಮಾವಿನಡಿ ಮಂಚಿಕೆಯೊಳ್
ಕುಸುರಿದಱಿದಡಗಿನಂತೆವೊ
ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್.

(೨) ನಾನು ಪಟ್ಟವೇರಿದಾಗ ಎಂಥ ಆಸೆ ಕಟ್ಟಿದ್ದೆ, ನನ್ನ ರಾಜ್ಯದಲ್ಲಿಯ ಪ್ರತಿಯೊಂದು ಕಾರ್ಯ ಪ್ರಾರ್ಥನೆಯಾಗಬೇಕು, ಪ್ರತಿಯೊಂದು ಪ್ರಾರ್ಥನೆ ಅರಿವಿನ ಮೆಟ್ಟಿಲಾಗಬೇಕು. ಪ್ರತಿಯೊಂದು ಮೆಟ್ಟಿಲು ದೇವರ ಸನಿಹಕ್ಕೆ ಒಯ್ಯಬೇಕು, ಆದರೆ ಪ್ರಾರ್ಥನೆಗೂ ರಾಜಕಾರಣದ ಬೇನೆ ಬಿಟ್ಟಿಲ್ಲ.

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **8 × $\frac{1}{2}$ = 04**

ಸಂಗರ, ಮುನ್ನೀರ್, ಗೇಹ, ಚರಿಗೆ, ತರಕ್ಷು, ಕಾಯ, ಫಿರ್ಯಾದು, ಕಾಜಿ, ವಜೀರ, ದೀವಟಿಗೆ, ಕಾಫರ, ಮಾತಂಗ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 04**

ಅವಲೋಕಿನಿ ದೇವತೆ, ಸುದತ್ತಾಚಾರ್ಯರು, ಮಲತಾಯಿ, ಶಿಹಾಬುದ್ದೀನ್.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಸೂಟ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್
(೨) ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.
(೩) ತಾಯಿ ರಕ್ಕಸಿಯಂತೆ ಕಾಯ ವಿಕಾರವು.
(೪) ನಿಜವಾದ ಅರಸು ಮನುಷ್ಯನಾಗಿದ್ದೇ ದೊಡ್ಡವನಾಗಬೇಕು.
(೫) ನಿನ್ನ ರಾಜ್ಯವೆಂದರೆ ಮರಣದ ಬಚ್ಚಲು ಮನೆಯಾಗಿದೆ.
(೬) ಆಗಸ ತೊಳೆದಷ್ಟು ಕೊಳೆಯನ್ನು ಯಾವ ಧರ್ಮ ಗುರುವೂ ತೊಳೆದಿಲ್ಲ.

3. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 08**

(೧) ದ್ರೋಣ–ಕರ್ಣರ ಮಧ್ಯೆ ನಡೆದ ಸಂವಾದದ ಸ್ವಾರಸ್ಯವನ್ನು ಬರೆಯಿರಿ.
(೨) ಇಹದ ಬದುಕಿನಲ್ಲಿದ್ದುಕೊಂಡೇ ಆತ್ಮೋನ್ನತಿಯನ್ನು ಸಾಧಿಸುವ ಆಶಯ ಅಕ್ಕನ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ?

(ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 5 = 05**

(೧) ಕೃಷ್ಣನ ಸ್ತುತಿ ಹಾಗೂ ನಿಂದೆಯ ಹಿಂದಿರುವ ಪುರಂದರದಾಸರ ಆಶಯಗಳೇನು?
(೨) ಜನಪದ ಗೀತೆಗಳಲ್ಲಿ ಬರುವ ಮಾತೃ ವಾತ್ಸಲ್ಯ ಭಾವವನ್ನು ಚಿತ್ರಿಸಿ.

4. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 08**

(೧) ತುಘಲಕ್‌ನ ವ್ಯಕ್ತಿತ್ವವನ್ನು ನಾಟಕದ ಹಿನ್ನೆಲೆಯಲ್ಲಿ ಅನಾವರಣಗೊಳಿಸಿ.

(೨) ನಜೀಬ, ಶೇಖ್ ಇಮಾಮುದ್ದೀನ, ಬರನಿ – ಈ ಪಾತ್ರಗಳನ್ನು ಪರಿಚಯಿಸಿ.

(ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 5 = 05**

(೧) ಅಝೀಝು

(೨) ರತನ ಸಿಂಹ

5. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) 'ನಾ ಕೊಂದ ಹುಡುಗಿ' ಕಥೆಯ ದುರಂತತೆಯನ್ನು ಕುರಿತು ಬರೆಯಿರಿ.

(೨) 'ಅಮಾಸ' ಕಥೆ ಶೋಷಣೆ ವಿರುದ್ಧದ ಸಾಂಸ್ಕೃತಿಕ ಎಚ್ಚರದ ಪ್ರತೀಕ – ವಿಶ್ಲೇಷಿಸಿ.

6. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) 'ಮೌಲ್ಯಗಳೇ ದೇವರು' ಎಂಬುದು 'ದೇವರು' ಕೃತಿಯಲ್ಲಿ ಹೇಗೆ ಪ್ರತಿಪಾದಿತವಾಗಿದೆ?

(೨) ದೇವರು ಸರ್ವಜ್ಞನೂ ಅಲ್ಲ, ಸರ್ವ ಶಕ್ತನೂ ಅಲ್ಲ' ಎಂಬುದನ್ನು ಲೇಖಕರು ಸಾಧಿಸುವ ಬಗೆ ಹೇಗೆ? ವಿವರಿಸಿ.

7. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(**80** ಅಂಕಗಳ ಸ್ಕೀಂನವರಿಗೆ **ಕಡ್ಡಾಯ** ಪ್ರಶ್ನೆ) :

(೧) ದೇವರ ಕಲ್ಪನೆಗೂ, ಮಾನವನ ಜೀವನಕ್ಕೂ ಇರುವ ಅಂತರ ಕೃತಿಯಲ್ಲಿ ಚಿತ್ರಿತವಾಗಿರುವ ರೀತಿ.

(೨) ದೇವರು ಹಾಗೂ ಧರ್ಮವನ್ನು ಕುರಿತಂತೆ ಲೇಖಕರ ವೈಚಾರಿಕ ದೃಷ್ಟಿಕೋನವನ್ನು ವಿಶ್ಲೇಷಿಸಿ.

---